All India Radio: Bangalore
National Bulletin In Kannada
22.09.2025  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳು ಇಂದಿನಿಂದ ಜಾರಿ
2. ಜಿಎಸ್‌ಟಿ ದರ ಪರಿಷ್ಕರಣೆ ಕೇವಲ ತೆರಿಗೆ ಕಡಿತವಲ್ಲ ; ಬದಲಿಗೆ ಉಳಿತಾಯ ಉತ್ಸವ - ಪ್ರಧಾನಿ ನರೇಂದ್ರ ಮೋದಿ
3. ಇಂದು ಅರುಣಾಚಲಪ್ರದೇಶ, ತ್ರಿಪುರಗೆ ಭೇಟಿ ನೀಡಲಿರುವ ಪ್ರಧಾನಿ - ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ
4. ದೇಶಾದ್ಯಂತ ಇಂದಿನಿಂದ ನವರಾತ್ರಿ ಹಬ್ಬ ಆರಂಭ - ೯ ದಿನ ದೇವಿಯ ೯ ರೂಪಗಳ ಆರಾಧನೆ
5. ಏಷ್ಯಾಕಪ್ ಟಿ-೨೦ ಕ್ರಿಕೆಟ್ ; ಸೂಪರ್ ೪ ರ ಹಂತದಲ್ಲಿ ಪಾಕಿಸ್ತಾನದ ವಿರುದ್ಧ ಭಾರತಕ್ಕೆ ೬ ವಿಕೆಟ್‌ಗಳ ಭರ್ಜರಿ ಜಯ

<><><><>

ನವರಾತ್ರಿಯ ಮೊದಲ ದಿನವಾದ ಇಂದಿನಿಂದ ಮುಂದಿನ ಪೀಳಿಗೆಯ ಸರಕು ಮತ್ತು ಸೇವಾ ತೆರಿಗೆ ಸುಧಾರಣೆಗಳು ಜಾರಿಗೆ ಬಂದಿದ್ದು, ಇದು ಶೇಕಡ ೧೨ ಮತ್ತು ೨೮ರ ತೆರಿಗೆ ಸ್ಲ್ಯಾಬ್‌ಗಳನ್ನು ತೆಗೆದುಹಾಕಿ, ಕೇವಲ ಶೇಕಡ ೫ ಮತ್ತು ೧೮ರ ತೆರಿಗೆ ಸ್ಲ್ಯಾಬ್‌ಗಳನ್ನು ಮಾತ್ರ ಉಳಿಸಿಕೊಂಡಿದೆ. ಈ ಎರಡು ಸ್ಲ್ಯಾಬ್‌ಗಳು ಈಗ ಐಷಾರಾಮಿ ಉತ್ಪನ್ನಗಳು ಅಥವಾ ನಿಷಿದ್ಧ ವಸ್ತುಗಳನ್ನು ಹೊರತುಪಡಿಸಿ ಎಲ್ಲಾ ವಸ್ತುಗಳು ಮತ್ತು ಸೇವೆಗಳನ್ನು ಒಳಗೊಂಡಿವೆ.  ಅಗತ್ಯ ವಸ್ತುಗಳು, ಔಷಧಿಗಳು, ಆರೋಗ್ಯ ವಿಮೆ ಸೇರಿದಂತೆ ಹಲವು ವಸ್ತು ಹಾಗೂ ಸೇವೆಗಳು ಶೇಕಡಾ ೫ ತೆರಿಗೆಯ ವ್ಯಾಪ್ತಿಗೆ ತರಲಾಗಿವೆ.

<><><><>

ಇಂದಿನಿಂದ ಜಿಎಸ್‌ಟಿ ಸುಧಾರಣೆಗಳು ಜಾರಿಗೆ ಬರುತ್ತಿದ್ದಂತೆ, ಆಟೋಮೊಬೈಲ್‌ಗಳ ಮೇಲಿನ ಗಮನಾರ್ಹ ತೆರಿಗೆ ಕಡಿತದ ಮೂಲಕ ನಾಗರಿಕರಿಗೆ ದೊಡ್ಡ ಪರಿಹಾರವನ್ನು ನೀಡುತ್ತವೆ ಎಂದು

ಅಂದಾಜಿಸಲಾಗಿದೆ. ದ್ವಿಚಕ್ರ ವಾಹನ ಬೈಕ್‌ಗಳು ಮತ್ತು ಸಣ್ಣ ಕಾರುಗಳಿಗೆ ಈಗ ಹಿಂದಿನ ೨೮ ಪ್ರತಿಶತದಿಂದ ೧೮ ಪ್ರತಿಶತಕ್ಕೆ ತಂದು ತೆರಿಗೆ ಕಡಿತಗೊಳಿಸಲಾಗಿದೆ. ಇದರ ಹೊರತಾಗಿ, ಮೋಟಾರ್ ಕಾರುಗಳು ಮತ್ತು ಮೋಟಾರ್‌ಬೈಕ್‌ಗಳ ತಯಾರಿಕೆಗೆ ಬಳಸುವ ಹೆಚ್ಚಿನ ಘಟಕಗಳು: ಆಟೋ ಘಟಕಗಳ ತೆರಿಗೆಯನ್ನು ಸಹ ಶೇಕಡ ೧೮ಕ್ಕೆ ಇಳಿಸಲಾಗಿದೆ. ಈ ಸುಧಾರಣೆಗಳು ಬೆಳವಣಿಗೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವುದು, ಎಂಎಸ್‌ಎಂಇ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಮತ್ತು ಆತ್ಮನಿರ್ಭರ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸುವ ಸರ್ಕಾರದ ಅಚಲ ಬದ್ಧತೆಯನ್ನು ಪ್ರದರ್ಶಿಸುತ್ತವೆ.

<><><>

ಪ್ರಧಾನಿ ನರೇಂದ್ರ ಮೋದಿ ಅವರು ಜಿಎಸ್‌ಟಿಯಲ್ಲಿ ಪ್ರಮುಖ ಸುಧಾರಣೆಯನ್ನು ಜಾರಿಗೆ ತರುವ ಮೂಲಕ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಇಂದಿನಿಂದ ಜಾರಿಗೆ ಬರಲಿರುವ ಜಿಎಸ್‌ಟಿ ಸುಧಾರಣೆಗಳ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು, ಈ ಸುಧಾರಣೆಗಳು ಮಧ್ಯಮ ವರ್ಗ, ಬಡವರು ಮತ್ತು ಕಡಿಮೆ ಆದಾಯದ ಕುಟುಂಬಗಳಿಗೆ ಮತ್ತು ದೇಶಾದ್ಯಂತ ೧೪೦ ಕೋಟಿ ನಾಗರಿಕರ ಜೀವನಕ್ಕೆ ಗಮನಾರ್ಹ ಪರಿಹಾರವನ್ನು ನೀಡುತ್ತವೆ ಎಂದು ಹೇಳಿದರು. ಅಡುಗೆ ಪಾತ್ರೆಗಳಿಂದ ಕಾರುಗಳವರೆಗೆ ದಿನನಿತ್ಯ ಬಳಸುವ ವಸ್ತುಗಳ ಬೆಲೆಗಳು ಕಡಿಮೆಯಾಗಲಿವೆ ಎಂದು ಹೇಳಿದರು.

<><><>

ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಪರಿಷ್ಕರಣೆ, ಮುಂದಿನ ಪೀಳಿಗೆಯ ಸುಧಾರಣೆಯಾಗಿದ್ದು, ಭಾರತದ ಆರ್ಥಿಕತೆಗೆ ವೇಗ ನೀಡಿ, ದೇಶಾದ್ಯಂತ ಮಧ್ಯಮ ವರ್ಗ, ಯುವಕರು ಮತ್ತು ಗ್ರಾಹಕರಿಗೆ ಪರಿಹಾರ ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ನಿನ್ನೆ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಹೊಸ ಜಿಎಸ್‌ಟಿ ದರಗಳು ಕೇವಲ ತೆರಿಗೆ ಕಡಿತವಲ್ಲ, ಬದಲಾಗಿ ದೈನಂದಿನ ಅಗತ್ಯ ವಸ್ತುಗಳ ಬೆಲೆಯನ್ನು ಕಡಿಮೆ ಮಾಡುವ ಮತ್ತು ಬಳಕೆ-ಚಾಲಿತ ಬೆಳವಣಿಗೆಯನ್ನು ಹೆಚ್ಚಿಸುವ ಜಿಎಸ್‌ಟಿ ಉಳಿತಾಯ ಹಬ್ಬವಾಗಿದೆ ಎಂದು ಹೇಳಿದರು. ಈ ಹೊಸ ತೆರಿಗೆ ಸುಧಾರಣೆಯ ಅನುಷ್ಠಾನದೊಂದಿಗೆ ದೇಶವು ಆತ್ಮನಿರ್ಭರ ಭಾರತದೆಡೆಗೆ ಪ್ರಮುಖ ಹೆಜ್ಜೆ ಇಡುತ್ತಿದೆ ಎಂದರು. ಈ ಸುಧಾರಣೆಗಳೊಂದಿಗೆ ದೇಶದ ಬೆಳವಣಿಗೆಯ ಚಿತ್ರಣ

ಬದಲಾಗುತ್ತದೆ. ಯುವಕರು, ನವ ಮಧ್ಯಮ ವರ್ಗ, ರೈತರು, ಮಹಿಳೆಯರು, ಅಂಗಡಿ ಮಾಲೀಕರು, ವ್ಯಾಪಾರಿಗಳು ಮತ್ತು ಉದ್ಯಮಿಗಳು ಈ ಉಳಿತಾಯ ಉತ್ಸವದಿಂದ ಹೆಚ್ಚಿನ ಪ್ರಯೋಜನ ಪಡೆಯುತ್ತಾರೆ ಎಂದು ಅವರು ಹೇಳಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ, (28 ಸೆಕೆಂಡುಗಳು)

ನಾಗರಿಕರು ಮತ್ತು ವ್ಯಾಪಾರಿಗಳು ದಶಕಗಳಿಂದ ಆಕ್ಟ್ರಾಯ್, ಪ್ರವೇಶ ತೆರಿಗೆ, ಮಾರಾಟ ತೆರಿಗೆ, ಅಬಕಾರಿ, ವ್ಯಾಟ್ ಮತ್ತು ಸೇವಾ ತೆರಿಗೆ ಸೇರಿದಂತೆ ತೆರಿಗೆಗಳ ಸಂಕೀರ್ಣ ಜಾಲದಲ್ಲಿ ಸಿಲುಕಿಕೊಂಡಿದ್ದರು. ತಮ್ಮ ಸರ್ಕಾರ ತೆರಿಗೆ ವ್ಯವಸ್ಥೆಯನ್ನು ಸರಳೀಕರಿಸಿದೆ. ೨೦೧೭ ರಲ್ಲಿ ರಾಜ್ಯಗಳು ಮತ್ತು ಪಾಲುದಾರರೊಂದಿಗೆ ಸಮಾಲೋಚಿಸಿದ ನಂತರ ತಮ್ಮ ಸರ್ಕಾರ ಜಿಎಸ್‌ಟಿಗೆ ಆದ್ಯತೆ ನೀಡಿದೆ. ಹಲವಾರು ತೆರಿಗೆಗಳನ್ನು ರದ್ದುಗೊಳಿಸಲಾಗಿದೆ. ಹೊಸ ಸುಧಾರಣೆಯಿಂದ ಕೇವಲ ಶೇಕಡಾ ೫ ಮತ್ತು ಶೇಕಡಾ ೧೮ ತೆರಿಗೆ ಸ್ಲ್ಯಾಬ್‌ಗಳು ಮಾತ್ರ ಉಳಿಯುತ್ತವೆ. ಒಂದು ರಾಷ್ಟ್ರ-ಒಂದು ತೆರಿಗೆಯ ಕನಸು ನನಸಾಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಕಳೆದ ೧೧ ವರ್ಷಗಳಲ್ಲಿ ೨೫ ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ ಎಂದು ಪ್ರಧಾನಿ ಸಂತೋಷ ವ್ಯಕ್ತಪಡಿಸಿದರು. ಈ ವರ್ಷ ಸರ್ಕಾರವು ೧೨ ಲಕ್ಷ ರೂಪಾಯಿಗಳವರೆಗೆ ಆದಾಯವನ್ನು ತೆರಿಗೆ ಮುಕ್ತಗೊಳಿಸುವ ಮೂಲಕ ತೆರಿಗೆ ಪರಿಹಾರವನ್ನು ನೀಡಿದೆ, ಇದು ಮಧ್ಯಮ ವರ್ಗಕ್ಕೆ ಗಣನೀಯ ಲಾಭ ಮತ್ತು ಅನುಕೂಲತೆಯನ್ನು ತರುತ್ತದೆ.

<><><><>

ಪ್ರಧಾನಿ ನರೇಂದ್ರ ಮೋದಿ ಇಂದು ಅರುಣಾಚಲ ಪ್ರದೇಶ ಮತ್ತು ತ್ರಿಪುರಾಕ್ಕೆ ಭೇಟಿ ನೀಡಲಿದ್ದಾರೆ. ಮೊದಲಿಗೆ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಲಿರುವ ಅವರು, ಇಟಾನಗರದಲ್ಲಿ ಮೂರು ಸಾವಿರದ ೬೦೦ ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಎರಡು ಪ್ರಮುಖ ಜಲವಿದ್ಯುತ್ ಯೋಜನೆಗಳಿಗೆ ಶಂಕುಸ್ಥಾಪನೆ ಸೇರಿದಂತೆ ಐದು ಸಾವಿರದ ನೂರು ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ನೆರವೇರಿಸಲಿದ್ದಾರೆ. ಇದರ ಜೊತೆಗೆ ಪ್ರಧಾನಿ ಈ ವೇಳೆ ನಡೆಯುವ ಸಾರ್ವಜನಿಕ ಸಮಾರಂಭವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ಇತ್ತೀಚಿನ ಜಿಎಸ್‌ಟಿ ದರ ಪರಿಷ್ಕರಣೆಯ ಪರಿಣಾಮದ ಕುರಿತು ಸ್ಥಳೀಯ ತೆರಿಗೆದಾರರು, ವ್ಯಾಪಾರಿಗಳು ಮತ್ತು ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ತ್ರಿಪುರಾದಲ್ಲಿ,

ಪ್ರಧಾನಮಂತ್ರಿ ಅವರು ತೀರ್ಥಕ್ಷೇತ್ರ ಪುನರುಜ್ಜೀವನ ಮತ್ತು ಆಧ್ಯಾತ್ಮಿಕ ಪರಂಪರೆ ವೃದ್ಧಿ ಯೋಜನೆಯಡಿಯಲ್ಲಿ ಮತಾಬರಿಯಲ್ಲಿರುವ ಮಾತಾ ತ್ರಿಪುರಸುಂದರಿ ದೇವಾಲಯ ಸಂಕೀರ್ಣದ ಅಭಿವೃದ್ಧಿಕಾರ್ಯ ಉದ್ಘಾಟಿಸಲಿದ್ದಾರೆ.

ತ್ರಿಪುರಾದ ಗೋಮತಿ ಜಿಲ್ಲೆಯ ಉದಯ್‌ಪುರ ಪಟ್ಟಣದಲ್ಲಿರುವ ಈ ದೇವಾಲಯ ಪ್ರಾಚೀನ ೫೧ ಶಕ್ತಿಪೀಠಗಳಲ್ಲಿ ಒಂದು.

<><><>

ದುರ್ಗಾದೇವಿಯ ೯ ರೂಪಗಳನ್ನು ಪೂಜಿಸಲು ಸಮರ್ಪಿಸಲಾಗಿರುವ ೯ ದಿನಗಳ ಕಾಲ ಆಚರಿಸಲಾಗುವ ನವರಾತ್ರಿ ಹಬ್ಬ ಇಂದಿನಿಂದ ಆರಂಭವಾಗಿದೆ. ಕರ್ನಾಟಕದಲ್ಲಿ ಈ ಹಬ್ಬವನ್ನು ದಸರಾ, ಪಶ್ಚಿಮ ಬಂಗಾಳದಲ್ಲಿ ದುರ್ಗಾ ಪೂಜಾ ಹೀಗೆ ಹಲವೆಡೆ ವಿವಿಧ ಹೆಸರುಗಳಲ್ಲಿ ರೀತಿಯಲ್ಲಿ ಕರೆಯಲಾಗುತ್ತಿದೆ. ಭಾರತದಲ್ಲಿ ಆಚರಿಸಲಾಗುವ ಪ್ರಮುಖ ಹಬ್ಬಗಳಲ್ಲಿ ಒಂದಾಗಿರುವ ಈ ಹಬ್ಬ ಪ್ರತಿದಿನ ದೇವಿಯ ರೂಪಗಳನ್ನು ಒಂದೊಂದು ವರ್ಣದೊಂದಿಗೆ ಆಚರಿಸಲಾಗುತ್ತದೆ. ನವರಾತ್ರಿಯ ಕೊನೆಯ ದಿನ, ದೇವಿಯು ಮಹಿಷಾಸುರನ್ನು ಸಂಹರಿಸಿದ ಸಂಕೇತವಾಗಿ ವಿಜಯದಶಮಿಯನ್ನು ಆಚರಿಸಲಾಗುವುದು. ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಇಂದು ಆರಂಭವಾಗಲಿದೆ. ಇಂದು ಬೆಳಗ್ಗೆ ಸುಮಾರು ೧೦ ಗಂಟೆ ವೇಳೆಗೆ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ನಾಡ ದೇವತೆ ಶ್ರೀ ಚಾಮುಂಡೇಶ್ವರ ದೇವಿಯ ಅಗ್ರ ಪೂಜೆಯೊಂದಿಗೆ ದಸರಾ ಮಹೋತ್ಸವ ಉದ್ಘಾಟನೆಗೊಳ್ಳಲಿದೆ. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತಿಯಲ್ಲಿ ಬುಕರ್ ಪ್ರಶಸ್ತಿ ವಿಜೇತ ಹಿರಿಯ ಸಾಹಿತಿ ಭಾನು ಮುಷ್ತಾಕ್, ದಸರಾ ಮಹೋತ್ಸವ ಉದ್ಘಾಟಿಸುವ ಕಾರ್ಯಕ್ರಮವಿದೆ. ಸಂಜೆ ಅರಮನೆಯ ಆವರಣದಲ್ಲಿ ಮುಖ್ಯಮಂತ್ರಿಯವರು ದಸರಾ ಸಾಂಸ್ಕೃತಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ಇಂದಿನಿಂದ ಅಕ್ಟೋಬರ್ ೨ರವರೆಗೆ ೧೧ ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

<><><>

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ

ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಲಕ್ಷಾಂತರ ಜನರ ಬದುಕನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ಹೇಗೆ ಕೈಗೆಟಕುವ  ವಸತಿ ಮತ್ತು ಆಧುನಿಕ ನಗರ ಮೂಲಸೌಕರ್ಯವನ್ನು ಖಚಿತಪಡಿಸಿದೆ ಎಂಬುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ. ಕಳೆದ ಹನ್ನೊಂದು ವರ್ಷಗಳಿಂದ ಒಂದು ನಿಶ್ಚಿತ ಸಂಕಲ್ಪದೊಂದಿಗೆ ಆಡಳಿತ ನಡೆಸುತ್ತಿರುವ ಕೇಂದ್ರ ಸರ್ಕಾರ, ದೇಶದಾದ್ಯಂತ ಪರಿವರ್ತನೆಯ ಬೀಜಗಳನ್ನು ಬಿತ್ತಿದೆ. ನಾಗರಿಕ ಕೇಂದ್ರಿತ ಸುಧಾರಣೆಗಳ ಮೂಲಕ, ಜೀವನವನ್ನು ಹೆಚ್ಚು ಸರಳ, ಸುಲಭಗೊಳಿಸಲು ಪ್ರಯತ್ನಿಸಿದೆ. ಈ ಎಲ್ಲಾ ಪ್ರಯತ್ನಗಳಲ್ಲಿ ಕೈಗೆಟಕುವ ವಸತಿ ಕೇಂದ್ರಬಿಂದುವಾಗಿದೆ. ಈ ದೃಷ್ಟಿಕೋನದೊಂದಿಗೆ, ಸರ್ಕಾರ, ಪ್ರಧಾನಮಂತ್ರಿ ಆವಾಸ್ ಯೋಜನೆ - ನಗರ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ - ಗ್ರಾಮೀಣ ಎಂಬ ಎರಡು ಪ್ರಮುಖ ಯೋಜನೆಗಳನ್ನು ರೂಪಿಸಿದೆ. ಈಗಾಗಲೇ ಒಟ್ಟು ೧.೫ ಲಕ್ಷ ಕೋಟಿ ಮೌಲ್ಯದ ೭ ಸಾವಿರ ೫೦೦ ಕ್ಕೂ ಹೆಚ್ಚು ಯೋಜನೆಗಳು, ಈ ಮಿಷನ್ ಅಡಿಯಲ್ಲಿ ಪೂರ್ಣಗೊಂಡಿವೆ. ಅಮೃತ್ ಮತ್ತು ಅಮೃತ್ ೨.೦ ಯೋಜನೆಗಳು, ಲಕ್ಷಾಂತರ ಜನರಿಗೆ ಶುದ್ಧ ಕುಡಿಯುವ ನೀರು ಹಾಗೂ ಒಳಚರಂಡಿ ಸಂಪರ್ಕಗಳನ್ನು ಒದಗಿಸಿ, ನೂರಾರು ಹಸಿರು ಉದ್ಯಾನಗಳು, ನದಿಗಳ ಪುನಶ್ಚೇತನ, ಹಾಗೂ ಎಲ್‌ಇಡಿ ಬೀದಿ ದೀಪಗಳ ಮೂಲಕ ನಗರ ಪ್ರದೇಶಗಳಿಗೆ ಹೊಸ ರೂಪ ನೀಡಿದೆ. ಇದೇ ಸಮಯದಲ್ಲಿ, ಉಜಾಲಾ ಯೋಜನೆಯಡಿ ಕೋಟ್ಯಾಂತರ ಮನೆಗಳಲ್ಲಿ ಎಲ್‌ಇಡಿ ದೀಪಗಳು ಬೆಳಗಿವೆ, ಪಿಎಂ ಉಜ್ವಲಾ ಯೋಜನೆಯಿಂದ ಶುದ್ಧ ಅಡುಗೆ ಅನೇಕ ಮನೆಗಳ ನಿತ್ಯದ ಸಂಕಷ್ಟಕ್ಕೆ ಪರಿಹಾರ ಒದಗಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಜಲಜೀವನ ಮಿಷನ್ ಮೂಲಕ ಶುದ್ಧ ನೀರು ತಲುಪಿಸುತ್ತಿದ್ದರೆ, ನಗರ ಹಾಗೂ ಹಳ್ಳಿಗಳಲ್ಲಿ ಸ್ವಚ್ಛ ಭಾರತ ಮಿಷನ್ ಪರಿಸರವನ್ನು ಸಂರಕ್ಷಿಸುತ್ತಿದೆ.

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೆಚ್-೧ಬಿ ವೀಸಾ ಅರ್ಜಿಗಳಿಗೆ ವಾರ್ಷಿಕ  ೧ ಲಕ್ಷ ಡಾಲರ್ ಶುಲ್ಕ ವಿಧಿಸುವುದಾಗಿ ಘೋಷಿಸಿದ ನಂತರ, ವಾಷಿಂಗ್ಟನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ತಕ್ಷಣದ ಸಹಾಯದ ಅಗತ್ಯವಿರುವ ಭಾರತೀಯ ಪ್ರಜೆಗಳಿಗಾಗಿ ತುರ್ತು ಸಹಾಯವಾಣಿ ಸ್ಥಾಪಿಸಿದೆ. ತುರ್ತು ಸಹಾಯವನ್ನು ಬಯಸುವ ಭಾರತೀಯ ಪ್ರಜೆಗಳು +೧-

೨೦೨-೫೫೦-೯೯೩೧ ಮೊಬೈಲ್ ಸಂಖ್ಯೆ ಮತ್ತು ವಾಟ್ಸ್‌ಪ್‌ಗೆ ಕರೆ ಮಾಡಬಹುದು ಎಂದು ಭಾರತೀಯ ರಾಯಭಾರ ಕಚೇರಿಯು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದೆ. ಈ ಸಂಖ್ಯೆಯನ್ನು ತಕ್ಷಣದ ತುರ್ತು ಸಹಾಯವನ್ನು ಬಯಸುವ ಭಾರತೀಯ ಪ್ರಜೆಗಳು ಮಾತ್ರ ಬಳಸಬೇಕು ಎಂದು ತಿಳಿಸಲಾಗಿದೆ. ಮುಂದಿನ ೨೪ ಗಂಟೆಗಳಲ್ಲಿ ಅಮೆರಿಕಕ್ಕೆ ಮರಳಲಿರುವ ಭಾರತೀಯ ಪ್ರಜೆಗಳಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ಒದಗಿಸುವಂತೆ ಭಾರತ ಸರ್ಕಾರ ತನ್ನ ಎಲ್ಲಾ ರಾಯಭಾರ ಕಚೇರಿಗಳು ಮತ್ತು ಪೋಸ್ಟ್‌ಗಳಿಗೆ ಸೂಚಿಸಿದೆ.

<><><><>

ಏಷ್ಯಾಕಪ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ಸೂಪರ್ ೪ ರ ಹಂತದ ಪಂದ್ಯದಲ್ಲಿ ನಿನ್ನೆ ಭಾರತ, ಪಾಕಿಸ್ತಾನವನ್ನು ೬ ವಿಕೆಟ್‌ಗಳಿಂದ ಮಣಿಸಿದೆ. ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೧೭೧ ರನ್ ಗಳಿಸಿತು. ಪ್ರತ್ಯುತ್ತರವಾಗಿ ಭಾರತ ೧೮.೫ ಓವರ್‌ಗಳಲ್ಲಿ ೪ ವಿಕೆಟ್ ನಷ್ಟಕ್ಕೆ ೧೭೪ ರನ್ ಗಳಿಸಿ ಭರ್ಜರಿ ಜಯ ದಾಖಲಿಸಿದೆ. ಭಾರತದ ಪರ ಅಭಿಷೇಕ್ ಶರ್ಮ ೭೪, ಶುಭ್‌ಮನ್‌ಗಿಲ್ ೪೭, ತಿಲಕ್ ವರ್ಮ ೩೦ ರನ್‌ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೊದಲ ಇನ್ನಿಂಗ್ಸ್‌ನಲ್ಲಿ ಭಾರತದ ಪರ ಶಿವಂದುಬೆ ೨, ಹರ್ದಿಕ್ ಪಾಂಡ್ಯ ಹಾಗೂ ಕುಲದೀಪ್ ಯಾದವ್ ತಲಾ ೧ ವಿಕೆಟ್ ಪಡೆದು ಪಾಕಿಸ್ತಾನವನ್ನು ಕಡಿಮೆ ರನ್‌ಗಳಿಗೆ ನಿಯಂತ್ರಿಸಲು ಸಫಲರಾದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>